

# ಸಮಾಜ ವಿಜ್ಞಾನ

## SOCIAL SCIENCE

**KANNADA MEDIUM**

**ನಾಲ್ಕನೆಯ ತರಗತಿ**

**STANDARD FOUR**

**ಮೂರನೆಯ ಅವಧಿ**

**Term III**



# ಚಿಹ್ನೆಗಳು ಮತ್ತು ಅವುಗಳ ಅರ್ಥಗಳು.



ಉತ್ತರಿಸು




ಸರಿಯಾದ ಉತ್ತರವನ್ನು ಆರಿಸು




ನಕ್ಷೆ ಚಟುವಟಿಕೆ




ಕಾರ್ಯ ಯೋಜನೆ



ಚಿಂತನೆಗೆ



ಹೊಂದಿಸು



ಬಿಟ್ಟ ಸ್ಥಳಗಳನ್ನು ತುಂಬಿರಿ



ಗುಂಪು ಚಟುವಟಿಕೆ








# ನಮ್ಮ ರಾಜ್ಯ

ಕೆಳಗೆ ಕೊಟ್ಟಿರುವ ಭಾರತದ ಭೂಪಟವನ್ನು ನೋಡಿ ಅದರಲ್ಲಿ ನಮ್ಮ ರಾಜ್ಯವನ್ನು ಕಂಡುಹಿಡಿದು, ನೆರೆ ರಾಜ್ಯಗಳ ಹೆಸರುಗಳನ್ನು ಬರೆಯಿರಿ

_______________ _______________ _______________



ಭಾರತದ ರಾಜ್ಯಗಳಲ್ಲಿ ತಮಿಳುನಾಡು ಒಂದು. ತಮಿಳುನಾಡು ಬಹಳ ಪ್ರಾಚೀನವಾದುದು. ತಮಿಳುನಾಡು ಸಂಘಕಾಲದಲ್ಲಿ ಚೇರರು, ಚೋಳರು, ಪಾಂಡಿಯಿರು ಆಗಿರುವ ತ್ರಿಮೂರ್ತಿಗಳಿಂದ ಆಳಲ್ಪಟ್ಟಿತು. ಭಾರತ ಸ್ವಾತಂತ್ರ್ಯ ಪಡೆದ ನಂತರ ತಮಿಳುನಾಡು, ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಮುಂದುವರಿದು ಆತ್ಮವಿಶ್ವಾಸದಿಂದ ಬೆಳೆಯುತ್ತಿದೆ.

ಭಾರತ ಸ್ವಾತಂತ್ರ್ಯ ಪಡೆದಾಗ ತಮಿಳುನಾಡು, ಚೆನ್ನೈ ಮಹಾನಗರ ಎನ್ನುವ ಹೆಸರಿನಲ್ಲಿ ಕರೆಯಲಾಯಿತು. ಅದು ಈಗಿರುವ ತಮಿಳುನಾಡು, ಆಂಧ್ರ, ಕರ್ನಾಟಕ ಮತ್ತು ಕೇರಳಗಳ ಕೆಲವು ಭಾಗಗಳನ್ನು ಹೊಂದಿತ್ತು. 1956 ರಲ್ಲಿ ಭಾಷೆಗಳ ಮೂಲಕ ರಾಜ್ಯಗಳನ್ನು ವಿಭಾಗಿಸುವಾಗ 'ಚೆನ್ನೈರಾಜ್ಯ' ಎಂದು ಹೆಸರಿಸಲಾಯಿತು.

ನಂತರ, 1968 ರಲ್ಲಿ ಹೆಸರಿಸಲ್ಪಟ್ಟ ಚೆನ್ನೈ ರಾಜ್ಯದ ಹೆಸರನ್ನು ಬದಲಾಯಿಸಿ ಕಾನೂನಿನ ಆಧಾರದ ಮೇಲೆ 14.01.1969ರಲ್ಲಿ ಚೆನ್ನೈ ರಾಜ್ಯ 'ತಮಿಳುನಾಡು' ಎಂದು ಅಂದಿನ ಮುಖ್ಯಮಂತ್ರಿಯಾದ ಮಹಾನ್ ಮೇಧಾವಿ ಅಣ್ಣಾ ಅವರಿಂದ ಹೆಸರು ಬದಲಾಯಿಸಲ್ಪಟ್ಟಿತು.

ತಮಿಳುನಾಡು, ಭಾರತದ ದಕ್ಷಿಣ ಪ್ರದೇಶದಲ್ಲಿದೆ. ಇದು ಭಾರತದ ಭೂವಿಸ್ತೀರ್ಣದಲ್ಲಿ ಹನ್ನೊಂದನೆಯ ದೊಡ್ಡ ರಾಜ್ಯವಾಗಿದೆ. ತಮಿಳುನಾಡು, ಭಾರತದ ಭೂಪ್ರದೇಶದಲ್ಲಿ 4% ವಿಸ್ತೀರ್ಣವನ್ನು ಹೊಂದಿದೆ. ಶಾಸ್ತ್ರೀಯ ಭಾಷೆಯಾದ ತಮಿಳು ಭಾಷೆಯು ತಮಿಳುನಾಡಿನ ಹೇರಾಳ ಜನರ ತಾಯಿ ಭಾಷೆಯಾಗಿದೆ.



ತಮಿಳುನಾಡು ಅತ್ಯಂತ ಉದ್ದವಾದ ಸಮುದ್ರ ತೀರವನ್ನು ಹೊಂದಿದೆ. ಇದರ ಉದ್ದ ಹೆಚ್ಚು ಕಡಿಮೆ ಸುಮಾರು 1000 ಕಿ.ಮೀ.ವರೆಗೆ ಇದೆ. ತಮಿಳುನಾಡಿನ ದಕ್ಷಿಣ ಪ್ರದೇಶದಲ್ಲಿ ಕನ್ಯಾಕುಮಾರಿ ಇದೆ. ಈ ಜಿಲ್ಲೆಯಲ್ಲಿ ಅರಬ್ಬೀಸಮುದ್ರ, ಬಂಗಾಳ ಕೊಲ್ಲಿ, ಹಿಂದೂ ಮಹಾಸಾಗರ ಈ ಮೂರು ಸಮುದ್ರಗಳು ಸೇರುತ್ತವೆ.

ತಮಿಳುನಾಡಿನ ಗಡಿಗಳು

| | | |
|---|---|---|
| ಪೂರ್ವ | – | ಬಂಗಾಳಕೊಲ್ಲಿ |
| ಪಶ್ಚಿಮ | – | ಕೇರಳ |
| ಉತ್ತರ | – | ಆಂಧ್ರ, ಕರ್ನಾಟಕ |
| ದಕ್ಷಿಣ | – | ಹಿಂದೂ ಮಹಾಸಾಗರ |

ಇವುಗಳನ್ನು ತಮಿಳುನಾಡಿನ ಗಡಿಗಳು ಎಂದು ಹೆಸರಿಸಲಾಗಿದೆ.

## ನೆರೆರಾಜ್ಯಗಳು:


ಆಂಧ್ರಪ್ರದೇಶ, ಕರ್ನಾಟಕ, ಕೇರಳವು ತಮಿಳುನಾಡಿನ ನೆರೆ ರಾಜ್ಯಗಳಾಗಿವೆ.

## ತಮಿಳುನಾಡು–ಪ್ರಾಕೃತಿಕ ರಚನೆ.

ತಮಿಳುನಾಡಿನ ಪ್ರಾಕೃತಿಕ ರಚನೆಯನ್ನು ಮೂರು ಭಾಗಗಳಾಗಿ ವಿಂಗಡಿಸಬಹುದು. ಅವು ಯಾವುವೆಂದರೆ, ಬೆಟ್ಟಗಳು, ಪೀಠಭೂಮಿ ಮತ್ತು ಸಮತಟ್ಟು ಪ್ರದೇಶ.

### 1. ಬೆಟ್ಟಗಳು:

ತಮಿಳುನಾಡಿನಲ್ಲಿರುವ ಬೆಟ್ಟದ ಪ್ರದೇಶಗಳ ಎರಡು ಭಾಗಗಳಾಗಿ ಕಾಣಲ್ಪಡುತ್ತವೆ. ಅವು ಪಶ್ಚಿಮ ಘಟ್ಟ ಸಾಲುಗಳು ಮತ್ತು ಪೂರ್ವ ಘಟ್ಟ ಸಾಲುಗಳು. ಪಶ್ಚಿಮ ಘಟ್ಟ ಸಾಲುಗಳು ತಮಿಳುನಾಡಿನ ಪಶ್ಚಿಮ ಭಾಗದಲ್ಲಿ ಅಡಗಿರುವ ಬೆಟ್ಟದ ಸಾಲುಗಳಾಗಿವೆ.




ಪೂರ್ವ ಘಟ್ಟ ಸಾಲುಗಳು ಮತ್ತು ಪಶ್ಚಿಮ ಘಟ್ಟ ಸಾಲುಗಳು ಬೇರೆ ಬೇರೆ ಬೆಟ್ಟದ ಸಾಲುಗಳಾಗಿವೆ. ಎರಡೂ ಬೆಟ್ಟದ ಸಾಲುಗಳು ನೀಲಗಿರಿ ಬೆಟ್ಟದಲ್ಲಿ ಒಟ್ಟಾಗಿ ಸಂಧಿಸುತ್ತದೆ. ನೀಲಗಿರಿ ಬೆಟ್ಟದ ಎತ್ತರವಾದ ಶಿಖರವು "ದೊಡ್ಡ ಬೆಟ್ಟ ಎನ್ನುವುದಾಗಿದೆ.

**ತಿಳಿದುಕೊಳ್ಳೋಣ.**

* ಪಶ್ಚಿಮ ಘಟ್ಟ ಸಾಲುಗಳಲ್ಲಿರುವ ಅತಿ ಎತ್ತರವಾದ ಬೆಟ್ಟಗಳು ನೀಲಗಿರಿ ಮತ್ತು ಆನೈಮಲೈ.
* ಆನೈ ಮಲೈಯಲ್ಲಿರುವ ಆನೈಮುಡಿ ದಕ್ಷಿಣ ಭಾರತದ ಅತಿ ಎತ್ತರವಾದ ಶಿಖರವಾಗಿದೆ

ಪಶ್ಚಿಮ ಘಟ್ಟ ಸಾಲುಗಳಲ್ಲಿರುವ ಬೆಟ್ಟಗಳಲ್ಲಿ 'ಉದಕ ಮಂಡಲ' ಪೂರ್ವ ಘಟ್ಟದ ಸಾಲುಗಳಲ್ಲಿ 'ಏರ್ಕಾಡ್' ಇವು ಪ್ರಸಿದ್ಧವಾದ ವಾಸಸ್ಥಳಗಳಾಗಿವೆ.

### 2. ಪೀಠಭೂಮಿ

ದಖ್ಖನ್ ಪೀಠಭೂಮಿಯ ದಕ್ಷಿಣ ಪೂರ್ವಭಾಗದಲ್ಲಿ ತಮಿಳುನಾಡಿದೆ. ತಮಿಳುನಾಡಿನಲ್ಲಿ ಕೊಯಮ್ಮತ್ತೂರು, ನೀಲಗಿರಿಯಂತಹ ಜಿಲ್ಲೆಗಳಲ್ಲಿ ಕಾಣುವ ಎತ್ತರವಾದ ಪ್ರದೇಶಗಳು ದಖ್ಖನ್ ಪೀಠಭೂಮಿಯಾಗಿದೆ.

೩. ಸಮತಟ್ಟು ಪ್ರದೇಶ :

ಪೂರ್ವಘಟ್ಟ ಸಾಲುಗಳಿಗೂ, ಬಂಗಾಳಕೊಲ್ಲಿಯ ಸಮುದ್ರ ತೀರಕ್ಕೂ ನಡುವೆ ಇರುವ ಪ್ರದೇಶವು ಪೂರ್ವ ಸಮುದ್ರ ತೀರದ ಸಮತಟ್ಟು ಪ್ರದೇಶವಾಗಿದೆ. ಈ ಸಮತಟ್ಟು ಪ್ರದೇಶದ ಅಗಲವು ೮೦ ಕಿ.ಮೀ ನಿಂದ ೨೫೦ ಕಿ.ಮೀ ವರೆಗೆ ಇದೆ. ಪೂರ್ವ ಸಮುದ್ರ ತೀರ ಸಮ ಪ್ರದೇಶವನ್ನು ತಮಿಳುನಾಡಿನಲ್ಲಿ " ಚೋಳಮಂಡಲ ಸಮುದ್ರ ತೀರದ ಭಾಗ" ಎಂದು ಕರೆಯಲ್ಪಡುತ್ತದೆ.

ತಿಳಿದುಕೊಳ್ಳೋಣ:

* ಚೋಳಮಂಡಲ ಸಮುದ್ರ ತೀರದಲ್ಲಿರುವ ಅತಿ ಮುಖ್ಯವಾದ ಬಂದರು ಚೆನ್ನೈ.
* ಚೆನ್ನೈಯಲ್ಲಿರುವ ಮೆರಿನಾ ಸಮುದ್ರ ತೀರವು ಪ್ರಪಂಚದ ಎರಡನೆಯ ಉದ್ದವಾದ ಸುಂದರ ಸಮುದ್ರ ತೀರವಾಗಿದೆ.

ತಮಿಳುನಾಡಿನಲ್ಲಿ ಪೂರ್ವ ಸಮುದ್ರ ತೀರ ಸಮ ಪ್ರದೇಶವು ಕನ್ಯಾಕುಮಾರಿ, ತಿರುನಲ್ವೇಲಿ, ತೂತುಕುಡಿ, ರಾಮನಾಥಪುರಂ, ತಿರುವಾರೂರು, ತಂಜಾವೂರು, ನಾಗಪಟ್ಟಣಂ, ಪುದುಕೋಟ್ಟೈ, ಕಡಲೂರು, ವಿಳುಪ್ಪುರಂ, ಕಾಂಚಿಪುರಂ, ಚೆನ್ನೈ ಮತ್ತು ತಿರುವಳ್ಳೂರ್ ಜಿಲ್ಲೆಗಳಲ್ಲಿ ಹರಡಿದೆ. ಈ ಸಮತಟ್ಟು ಪ್ರದೇಶದಲ್ಲಿ ಹರಡಿರುವ ಸಂಪದ್ಭರಿತವಾದ ಮೆಕ್ಕಲು ಮಣ್ಣು ವ್ಯವಸಾಯಕ್ಕೆ ಬಹಳ ಉಪಯುಕ್ತವಾಗಿದೆ.

ನದಿಗಳು:

ತಮಿಳುನಾಡಿನಲ್ಲಿ ಕಾವೇರಿ, ವೈಗೈ, ತಾಮಿರಭರಣಿ, ದಕ್ಷಿಣಪೆಣ್ಣೈ, ಪಾಲಾರ್ ನಂತಹ ನದಿಗಳು ಹರಿಯುತ್ತಿವೆ. ಇವುಗಳು ಪೂರ್ವಮುಖವಾಗಿ ಕೆಲವು ಜಿಲ್ಲೆಗಳಲ್ಲಿ ಹರಿದು ಬಂಗಾಳಕೊಲ್ಲಿಯನ್ನು ಸೇರುತ್ತವೆ.





ತಮಿಳುನಾಡು ಶಿಕ್ಷಣ, ಆರೋಗ್ಯ, ಕಾನೂನು, ಉದ್ಯೋಗವಕಾಶ ಇನ್ನು ಅನೇಕ ಇಲಾಖೆಗಳಲ್ಲಿ ಪ್ರಗತಿಯನ್ನು ಹೊಂದಿ ಬೆಳವಣಿಗೆಯ ಹಾದಿಯಲ್ಲಿ ಮುನ್ನಡೆಯುತ್ತಿದೆ ಬರುವ ಕಾಲದಲ್ಲಿ ಭಾರತದ ಆದರ್ಶ ರಾಜ್ಯವಾಗಿರುತ್ತದೆ ಎನ್ನುವುದರಲ್ಲಿ ಸಂದೇಹವಿಲ್ಲ.

## ತಮಿಳುನಾಡು-ರಾಜಕೀಯ ರಚನೆ

ನಮ್ಮ ತಮಿಳುನಾಡನ್ನು 32 ಜಿಲ್ಲೆಗಳಾಗಿ ವಿಭಾಗಿಸಲಾಗಿದೆ. ತಮಿಳುನಾಡಿನ ರಾಜಧಾನಿ ಚೆನ್ನೈ. ಇದು ಭಾರತದ 4ನೇ ಅತಿ ದೊಡ್ಡ ನಗರವಾಗಿದೆ. ತಮಿಳುನಾಡು ಭಾರತದಲ್ಲಿ ಅತಿ ಹೆಚ್ಚು ಜನಸಂಖ್ಯೆಯನ್ನು ಹೊಂದಿರುವ ರಾಜ್ಯಗಳಲ್ಲಿ 7ನೇ ಸ್ಥಾನದಲ್ಲಿದೆ.

### ತಮಿಳುನಾಡು-ರಾಜಕೀಯ




ತಮಿಳುನಾಡು ಬೇಸಾಯ ಕ್ಷೇತ್ರದಲ್ಲಿ ಪ್ರಾವಿಣ್ಯತೆಯನ್ನು ಪಡೆದಿದೆ. ತಮಿಳುನಾಡಿನಲ್ಲಿರುವ ಕೊಯಮ್ಮತ್ತೂರು-ಮಗ್ಗದ ಕಾರ್ಖಾನೆ, ಈರೋಡು-ಹರಿಶಿನ ಸಾಗುವಳಿ, ತಿರುಪ್ಪೂರ್-ತಯಾರಿಸಿದ ಬಟ್ಟೆಗಳನ್ನು ರಫ್ತು ಮಾಡುವುದು, ಸೇಲಂ-ಕಬ್ಬಿಣ, ಉಕ್ಕು ಕರಗಿಸುವ ಕಾರ್ಖಾನೆ, ನಾಮಕಲ್-ಕೋಳಿ ಸಾಕಾಣಿಕೆ, ಶಿವಕಾಶಿ-ಮರಗೆಲಸ, ಪಟ್ಟಾಸುಗಳನ್ನು ತಯಾರಿಸುವುದು, ವೇಲೂರು-ಚರ್ಮದ ಕೆಲಸ, ತಂಜಾವೂರು-ವ್ಯವಸಾಯ, ಚೆನ್ನೈ- ಸುದ್ದಿಸಂಪರ್ಕ ಮಾಧ್ಯಮದಲ್ಲಿ ಹೆಸರುವಾಸಿಯಾಗಿದೆ.

ತಮಿಳುನಾಡು ಹಲವು ಇಲಾಖೆಗಳಲ್ಲಿ ಅಭಿವೃದ್ಧಿ ಹೊಂದಿ, ಶಿಕ್ಷಣ ಜ್ಞಾನ, ಸಾಮೂಹಿಕ ಆರೋಗ್ಯ, ಕಾನೂನಿನ ನಿಯಮಗಳನ್ನು ಪಾಲಿಸುವುದು, ವೃತ್ತಿ ಬೆಳವಣಿಗೆ ಇಂತಹವುಗಳಲ್ಲಿ ಭಾರತದ ಆದರ್ಶ ರಾಜ್ಯಗಳಲ್ಲಿ ಒಂದಾಗಿದೆ.

### ತಮಿಳುನಾಡು ಸರ್ಕಾರದ ಚಿಹ್ನೆಗಳು

ತಮಿಳುನಾಡು ಸರ್ಕಾರದ ಮುದ್ರೆಯಲ್ಲಿರುವ ಚಿಹ್ನೆ ಶ್ರೀವಿಲ್ಲಿಪುತ್ತೂರ್ ದೇವಸ್ಥಾನದ ಗೋಪುರದ ಚಿತ್ರವಾಗಿದೆ. ಓತ, ಈಚಲಮರ, ಪಾರಿವಾಳ ಇವುಗಳು ತಮಿಳುನಾಡು ಸರ್ಕಾರದ ಚಿಹ್ನೆಗಳಾಗಿವೆ. ಮತ್ತು ಕಬಡಿ ನಮ್ಮ ರಾಜ್ಯದ ಮುಖ್ಯ ಆಟವಾಗಿದೆ.


ತಮಿಳುನಾಡು ಸರ್ಕಾರದ ಮುದ್ರೆ


ಹತ್ತಿಹಣ್ಣು


ಓತ


ಪಾರಿವಾಳ


ಭರತನಾಟ್ಯ


ಈಚಲಮರ


ಸೆಂಗಾದಳ ಹೂ


ಕಬಡಿ

**ಚಟುವಟಿಕೆಗಳು: ತಮಿಳುನಾಡಿನ ಭೂಪಟದ ಸಹಾಯದಿಂದ ಮಾಡಿರಿ**

1. ತಮಿಳುನಾಡಿನ ರಾಜಕೀಯ ವಿಭಾಗವನ್ನು ಭೂಪಟದಲ್ಲಿ ನೋಡು. ಅದರಲ್ಲಿ ನಿಮ್ಮ ಜಿಲ್ಲೆಗೆ ಬಣ್ಣ ಹಚ್ಚು. ನಿನ್ನ ಜಿಲ್ಲೆಯನ್ನು ಕೇಂದ್ರವಾಗಿಟ್ಟುಕೊಂಡು ಅದರ ನಾಲ್ಕು ದಿಕ್ಕುಗಳಲ್ಲಿರುವ ಜಿಲ್ಲೆಗಳನ್ನು ಬರೆಯಿರಿ.


ನನ್ನ ಜಿಲ್ಲೆ ______________________ ಪೂರ್ವಕ್ಕೆ ______________________

ಪಶ್ಚಿಮಕ್ಕೆ ______________________ ಉತ್ತರಕ್ಕೆ ______________________


ದಕ್ಷಿಣಕ್ಕೆ ______________________

2. ನೀನು ತಿರುಚಿನಾಪಳ್ಳಿ ಜಿಲ್ಲೆಯಿಂದ ಕೃಷ್ಣಗಿರಿ ಜಿಲ್ಲೆಗೆ ಹೋಗವೆ ಎಂದು ಊಹಿಸಿಕೊ. ಆಗ ನೀನು ಯಾವ ಯಾವ ಜಿಲ್ಲೆಯನ್ನು ದಾಟಿ ಹೋಗಬೇಕೆಂಬುದನ್ನು ಕಂಡುಹಿಡಿ.

3. ನಮ್ಮ ತಮಿಳುನಾಡನ್ನು ಸುತ್ತುವರಿದಿರುವ 3 ಸಮುದ್ರಗಳನ್ನು ಭೂಪಟವನ್ನು ನೋಡಿ ಬರೆಯಿರಿ. ಕೊಟ್ಟಿರುವ ತಮಿಳುನಾಡಿನ ರಾಜಕೀಯ ಭೂಪಟದಲ್ಲಿ ಎಲ್ಲಾ ಜಿಲ್ಲೆಗಳನ್ನು ಹೆಸರಿಸಿ ಬರೆಯಿರಿ.



## ಮೌಲ್ಯಮಾಪನ



### I. ಬಿಟ್ಟ ಸ್ಥಳಗಳನ್ನು ತುಂಬಿರಿ.

1. ತಮಿಳುನಾಡು, ಭಾರತದ _________ ದೊಡ್ಡ ರಾಜ್ಯವಾಗಿದೆ.
2. ನಿನ್ನ ಜಿಲ್ಲೆಯ ಹೆಸರು _________________.
3. ತಮಿಳುನಾಡಿನ ಎರಡು ಬೆಟ್ಟದ ಸಾಲುಗಳು_________ ಮತ್ತು ____________.
4. ನಿನ್ನ ಜಿಲ್ಲೆಯಲ್ಲಿ ಹರಿಯುವ ನದಿಗಳು____________________.
5. ತಮಿಳುನಾಡಿನಲ್ಲಿ ರಚನೆಯಾಗಿರುವ ಬೆಟ್ಟದ ವಾಸಸ್ಥಳಗಳು_____________.

### II. ಹೊಂದಿಸು.



| | | |
|---|---|---|
| 1. ತಮಿಳುನಾಡು ಎಂದು ಹೆಸರಿಟ್ಟವರು | - | ತಮಿಳುನಾಡಿನ ರಾಜಧಾನಿ |
| 2. ದೊಡ್ಡ ಬೆಟ್ಟ | - | ಕನ್ಯಾಕುಮಾರಿ |
| 3. ಪೂರ್ವಸಮುದ್ರ ತೀರದ ಸಮತಟ್ಟಾ | - | ನೀಲಗಿರಿ ಬೆಟ್ಟದ ಅತಿ ಎತ್ತರವಾದ ಶಿಖರ |
| 4. ಚೆನ್ನೈ | - | ಮೇಧಾವಿ ಅಣ್ಣಾ |
| 5. ತಮಿಳುನಾಡಿನ ದಕ್ಷಿಣ ಗಡಿ | - | ಚೋಳಮಂಡಲ ಸಮುದ್ರ ತೀರ |

### III. ಪ್ರಶ್ನೆಗಳಿಗೆ ಉತ್ತರಿಸು.



1. ತಮಿಳುನಾಡಿನ ನೆರೆರಾಜ್ಯಗಳು ಯಾವುವು?
2. ಪಶ್ಚಿಮ ಘಟ್ಟದ ಸಾಲುಗಳು, ಪೂರ್ವ ಘಟ್ಟ ಸಾಲುಗಳು ಎಲ್ಲಿ ಸಂಧಿಸುತ್ತವೆ?
3. ತಮಿಳುನಾಡು ದಖ್ಖನ್ ಪೀಠಭೂಮಿಯ ಯಾವ ಭಾಗದಲ್ಲಿದೆ?
4. ಪೂರ್ವ ಸಮುದ್ರ ತೀರ ಸಮತಟ್ಟು ಯಾವ ಯಾವ ಜಿಲ್ಲೆಗಳಲ್ಲಿ ಹರಡಿದೆ?
5. ತಮಿಳುನಾಡಿನಲ್ಲಿ ಹರಿಯುವ ನದಿಗಳು ಯಾವ ಸಮುದ್ರದಲ್ಲಿ ಸೇರುತ್ತವೆ?

### IV. ತಿಳಿದುಕೊಳ್ಳಿ.

ಸೆಂದುರೈಯಲ್ಲಿ ಬಂಡೆಯ ಕೆಳಗೆ ಡೈನೋಸರ್ ಮೊಟ್ಟೆಯ ಆಧಾರಗಳು ಸಿಕ್ಕಿದೆ. ಸಾರೋಗೋಟ್ ಎನ್ನುವ ಸೂಕ್ಷ್ಮಾಣು ಜೀವಿಗಳು ಕಾರ್ನೋಟೊರಸ್ ಎನ್ನುವ ಸಸ್ಯಹಾರಿ ಜೀವಿಗಳು ಜೀವಿಸಿದ ಪ್ರದೇಶವೇ ಈಗಿನ ತಮಿಳುನಾಡು.

